ಒಳ್ಳೇದು'' ಎಂದ ಶಾಲೂನ ಮಾತನ್ನು ಗೆಳತಿಯರಿಬ್ಬರೂ ತಳ್ಳಿ ಹಾಕಿದರು. ತಮ್ಮ ಊರಿನಲ್ಲಿ ಅವರೆಂದೂ ಜೀನ್ಸ್ ಹಾಕಿದವರೇ ಅಲ್ಲ. ಅಲ್ಲೆಲ್ಲ ಸೀರೆಯೇ ಅವರ ನಾರ್ಮಲ್ ಮತ್ತು ನ್ಯಾಚುರಲ್ ಡ್ರೆಸ್ ಕೋಡ್ ಆಗಿದೆ. ಆದರೆ, ಹೀಗೆ ಗೆಳತಿಯರಷ್ಟೇ ಸೇರಿ ಹೊರಟು ಬಂದಿರುವ ಯುರೋಪ್ ಟೂರಿನಲ್ಲಿ ಎಲ್ಲರೂ ಜೀನ್ಸ್ ತೊಟ್ಟು, ಮೇಲೆ ದಿನಕ್ಕೊಂದು ಬಗೆಯ ಟಾಪ್ ಹಾಕಿಕೊಳ್ಳುತ್ತಾರೆ. ಅನುಕೂಲಕ್ಕೆಂದು ಶುರುವಾದದ್ದು ಈಗವರ ಪ್ರೀತಿಯ ಉಡುಗೆಯಾಗಿದ್ದೂ ಹೌದು. ಯುರೋಪಿನ ಮೈ ನಡುಗಿಸುವ ಚಳಿಗೆ ಥರ್ಮಲ್ ಮೇಲೆ ಹಾಕುವ ದಪ್ಪ ಡೆನಿಮ್ ಬಟ್ಟೆಯ ಜೀನ್ಸು ಕಾಲುಗಳನ್ನು ಬೆಚ್ಚಗಿಡುತ್ತದೆ. ಮೇಲೆ ಎರಡೆರಡು ಸ್ವೆಟರ್‌ಗಳು, ಇಲ್ಲವೇ ಜರ್ಕಿನ್‌ಗಳು ಎದೆಗೂಡನ್ನು ರಕ್ಷಿಸಿದರೂ ಒಮ್ಮೊಮ್ಮೆ ಬೀಸಿಬರುವ ಕುಳಿರ್ಗಾಳಿಯ ಹೊಡೆತಕ್ಕೆ ಬೆನ್ನುಹುರಿಯಲ್ಲಿ ಹುಟ್ಟಿ ಮೇಲೇರಿ ಬರುವ ನಡುಕ ಇವರಿಗೆಲ್ಲ ಹೊಚ್ಚಹೊಸತು. ಈ ಪರಿಯ ಚಳಿಯನ್ನು ತಮ್ಮ ಬಿಸಿಲೂರಿನಲ್ಲಿ ಕಲ್ಪಿಸುವುದೇ ಸಾಧ್ಯವಿಲ್ಲ.

''ಫಾಯರ್ ಪ್ಲೇಸ್ ಇರಬಹುದು, ಚಳಿ ಕಾಸಿದರಾಯ್ತು ಬಾ'' ಎಂದು ಗೆಳತಿಯರಿಬ್ಬರೂ ತುಸು ಭರವಸೆ ನೀಡಿದ ಮೇಲೆ ತನ್ನ ಟ್ರಾಲಿ ಬ್ಯಾಗಿನಿಂದ ಕುಂಕುಮ ಕೆಂಪು ಕಲರಿನ ಎಂಬ್ರಾಯಡರಿ ಮಾಡಿದ ಜಾರ್ಜೆಟ್ ಸೀರೆಯನ್ನು ಹೊರತೆಗೆದಳು ಶಾಲೂ. ತುಟಿಗಳಿಗೆ ಕೆಂಪು ಲಿಪ್‌ಸ್ಟಿಕ್ ಅನ್ನು ತೆಳುವಾಗಿ ಹಚ್ಚಿ ತಯಾರಾದಳು. ಇವರು ಮೂರನೇ ಮಹಡಿಯಲ್ಲಿ ಲಿಫ್ಟ್‌ನಲ್ಲಿ ನುಸುಳಿದಾಗ ಅದಾಗಲೇ ಅದರಲ್ಲಿದ್ದ ಫೆಲಿಕ್ಸ್ ಮೂವರನ್ನೂ ನೋಡಿ ಅಗಲವಾಗಿ ನಗುತ್ತ, ''ವೆಲಕಮ್ ಲವ್ಲಿ ಲೇಡೀಸ್ ಇನ್ ವಂಡರಫುಲ್ ಡ್ರೆಸಸ್'' ಎಂದು ನಾಟಕೀಯವಾಗಿ ಬಗ್ಗಿ ಗೌರವ ಸೂಚಿಸಿದ. ಇವರೂ ನಗುನಗುತ್ತ ಅವನಿಗೆ, ''ಥ್ಯಾಂಕ್ ಯು ಸೋ ಮಚ್ ಡಿಯರ್ ಫೆಲಿಕ್ಸ್'' ಎಂದರು. ಕೆಳಗೆ ಡೈನಿಂಗ್ ಹಾಲ್‌ನಲ್ಲಿ ಅದಾಗಲೇ ಇವರ ಸಹಪ್ರವಾಸಿಗರೆಲ್ಲ ಸೇರಿ ಕಲಕಲ ಹರಟೆ, ಗಲಗಲ ನಗುವಿನಲ್ಲಿ ಕಳೆದುಹೋಗಿದ್ದರು. ಕೈಯಲ್ಲೊಂದು ಬಿಯರ್ ಗ್ಲಾಸ್ ಹಿಡಿದು ಮೂಲೆಯ ಟೇಬಲ್ ಹುಡುಕಿಕೊಂಡು ಕುಳಿತ ಕೋಚ್ ಕ್ಯಾಪ್ಟನ್ ಎಡ್ರಿಕ್ ಇವರನ್ನು ನೋಡಿ ನಕ್ಕು ಗ್ಲಾಸನ್ನು ಮೇಲಕ್ಕೆತ್ತಿ ಚಿಯರ್ಸ್ ಎಂದ. ಅದೇ ಅವನು ತಮ್ಮ ಇಂದಿನ ಉಡುಗೆಗೆ ನೀಡಿದ ಕಾಂಪ್ಲಿಮೆಂಟ್ ಎನ್ನುವುದು ಅವರಿಗೆ ಅರ್ಥವಾಯ್ತು. ಏಕೆಂದರೆ, ಪೋಲೆಂಡ್‌ನ ಎಡ್ರಿಕ್‌ಗೆ ಇಂಗ್ಲಿಷ್ ಅಷ್ಟೊಂದು ಬರದು. ಒಂದೊಂದೇ ಶಬ್ದಗಳನ್ನು ಕಷ್ಟಪಟ್ಟು ನಾಲಿಗೆಗೆ ಎಳೆದು ತರುತ್ತ ಮಾತನಾಡುವ ಎಡ್ಡಿ ಕಣ್ಣುಗಳಲ್ಲೇ ತನ್ನೆಲ್ಲ ಭಾವಗಳನ್ನೂ ಸ್ಫುರಿಸಿಬಿಡುತ್ತಾನೆ. ಭಾಷೆಯ ಹಂಗು ಮೀರಿ ಈಗಾಗಲೇ ಎಲ್ಲರ ಸ್ನೇಹ ಗಳಿಸಿದ್ದಾನೆ ಮುಗ್ಧ ಮುಖದ ಎಡ್ಡಿ. ಲಂಡನ್ನಿನ ಪ್ರವಾಸ ಮುಗಿಸಿ ಯುರೋಪಿನ ಉಳಿದ ದೇಶಗಳ ಪ್ರಯಾಣದಲ್ಲಿ ಬಸ್ ಡ್ರೈವರ್ ಆಗಿ ಎಡ್ರಿಕ್ ಮತ್ತು ಗೈಡ್ ಆಗಿ ಫೆಲಿಕ್ಸ್ ಇವರ ಗುಂಪನ್ನು ಸೇರಿಕೊಂಡಿದ್ದಾರೆ. ಹೆಚ್ಚು ಕಲಿತಿರದ ಎಡ್ಡಿ ಸಂಗೀತಪ್ರಿಯ. ಡ್ರೈವಿಂಗ್ ಮಾಡುವಾಗಲೆಲ್ಲ ತನ್ನದೇ ಪೊಲಿಶ್ ಭಾಷೆಯ ಹಾಡುಗಳನ್ನು ಗುನುಗುತ್ತ ಸಂತೋಷವಾಗಿರುತ್ತಾನೆ. ಆಗೀಗ ತನ್ನೆದುರು ಇರುವ ಮಿರರ್‌ನಲ್ಲಿ ಹಿಂದೆ ಕುಳಿತವರನ್ನು ನೋಡುತ್ತಾ ನಗುತ್ತಾನೆ. ಬಸ್ಸು ನಿಲ್ಲಿಸಿದ ತಕ್ಷಣ ಸಿಗರೇಟು ಸೇದುವ ಗಂಡಸರೊಡನೆ ಬೆರೆತು ತಾನೂ ಒಂದೆರಡು ದಮ್ ಎಳೆಯುತ್ತಾನೆ. ಯಾರೇ ಅವನ ಮುಂದಿನಿಂದ ಹಾಯ್ದರೂ ಮುಗ್ಧನಗೆ ಬೀರುತ್ತ, ''ಹಾಯ್'' ಎನ್ನುತ್ತಾನೆ. ಸಮಾಧಾನಿಯಾದ ಎಡ್ಡಿ ಹೀಗೆ ಎಲ್ಲರೊಳಗೊಂದಾಗಿ ಬೆರೆತು ಹೋಗಿದ್ದಾನೆ.

ಒಟ್ಟು ನಲವತ್ತು ಪ್ರವಾಸಿಗಳಿರುವ ಈ ಗುಂಪನ್ನು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮುನ್ನಡೆಸುತ್ತಿರುವ ಟೂರ್ ಮ್ಯಾನೇಜರ್ ಮಮತಾ ಒಮ್ಮೆ ತುಂಬ ಮೃದುವಾಗಿ, ಮತ್ತೊಮ್ಮೆ ಬಹಳ ಒರಟಾಗಿ, ಒಟ್ಟಿನಲ್ಲಿ ಒಂದು ಒಗಟಾಗಿ ಕಾಡುವ ಹೆಣ್ಣಾಗಿ ಗೋಚರಿಸಿದ್ದಾಳೆ. ಆದರೆ, ಅವಳ ಸಮಯ ಪಾಲನೆ, ಶಿಸ್ತು ಎಲ್ಲರ ಮನ ಗೆದ್ದಿದೆ. ಇಪ್ಪತ್ತೈದು